


ಪುತ್ರಿಯರಾದ ಸೀಮಂತಿನಿ, ತೇಜಸ್ವಿನಿ ಅವರೊಂದಿಗೆ ಅನುಪಮಾ–ನಿರಂಜನ ದಂಪತಿ

ಕತೆಗಳಲ್ಲಿ ಬಹಳ ತೀವ್ರವಾಗಿ ಅನುಭವಿಸಬಹುದು. ಅದು ಅಂಗೈಯಲ್ಲಿ ಬೆಂಕಿಯ ಕೆಂಡ ಹಿಡಿದಂಥ ಅನುಭವ.

## 5

ನಿರಂಜನರು ಬೆಂಗಳೂರಿಗೆ ಹೋಗಿ ನೆಲೆಸಿದ್ದು ಒಳ್ಳೆಯದೇ ಆಯಿತು. ಅವರ ಚಿಂತನೆಗೆ ಅನುವು ದೊರೆತು ಅನೇಕ ಕೃತಿಗಳನ್ನು ರಚಿಸುವ, ಸಂಪಾದಿಸುವ, ಪತ್ರಿಕೆಗಳಿಗೆ ಬರೆಯುವ ಅವಕಾಶ ಅಲ್ಲಿ ಸಿಕ್ಕಿತು. ಜೊತೆಗೆ ಡಾ. ಅನುಪಮಾ ಅವರ ವೈದ್ಯಕೀಯ ಸೇವೆಯನ್ನು ಲಕ್ಷಿಸುವ, ಗೌರವಿಸುವ ಜನರೂ ಸಿಕ್ಕರು. ಅಲ್ಲದೆ, ಅನುಪಮಾ ನಿರಂಜನರು ಸಹ ವೈದ್ಯ ವೃತ್ತಿಯ ಜೊತೆಗೆ ತಮ್ಮ ಸಾಹಿತ್ಯಿಕ ಪ್ರವೃತ್ತಿಗೂ ಅವಕಾಶ ಕಂಡುಕೊಂಡರು. ಆ ಹೊತ್ತಿಗೆ ನಾವು ಮೂವರು ಸ್ನೇಹಿತರು ಕೂಡಿಕೊಂಡು ಧಾರವಾಡದಿಂದ 'ಸಂಕ್ರಮಣ' ಎಂಬ ದ್ವೈಮಾಸಿಕ ಸಾಹಿತ್ಯ ಸಂಕಲನವನ್ನು ಪ್ರಕಟಿಸತೊಡಗಿದ್ದೆವು. ನಿರಂಜನರು ಆಗ 'ಪ್ರಜಾವಾಣಿ'ಯಲ್ಲಿ 'ಬೇವು ಬೆಲ್ಲ' ಹೆಸರಿನ ಅಂಕಣ ಬರೆಯುತ್ತಿದ್ದರು. ನಾವು ಭೌಗೋಲಿಕವಾಗಿ ಒಂದು ಅಂತರದಲ್ಲಿದ್ದರೂ ನಿರಂಜನರು ನಮ್ಮನ್ನು ಗಮನಿಸುತ್ತಲೇ ಇದ್ದರು. 'ಪ್ರಜಾವಾಣಿ'ಯ ತಮ್ಮ 'ಬೇವು ಬೆಲ್ಲ'ದಲ್ಲಿ (1964 ಆಗಸ್ಟ್ 30) ನಮ್ಮ ಮೂವರ ಸಾಹಿತ್ಯಿಕ ಸಾಧನೆಗಳನ್ನು ಮತ್ತು ಮುಕ್ತ ಧೋರಣೆಯ ನಮ್ಮ ಪ್ರಥಮ 'ಸಂಕ್ರಮಣ'ವನ್ನು ತುಂಬ ಮೆಚ್ಚಿಕೊಂಡು ಬರೆದಿದ್ದರು. ಅವರ ಬರವಣಿಗೆ